# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 253 / 2015

ಸಿಡಬ್ಲ್ಯೂ- 8
ಪಿಡಬ್ಲ್ಯೂ- 3

ದಿನಾಂಕಃ **26.03.2026.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ದಂಡ ಪ್ರಕ್ರಿಯ ಸಹಿತೆ ಕಲಂಃ **299** ಅಡಿಯಲ್ಲಿ ದಾಖಲಿಸಿಕೊಂಡ ಸಾಕ್ಷಿ.

ಸಾಕ್ಷಿಯ ಹೆಸರುಃ - ಶಂಕರಗೌಡ
ತಂದೆಯ ಹೆಸರುಃ - ಈರಣ್ಣಗೌಡ
ವಯಸ್ಸುಃ - **49** ವರ್ಷ
ಉದ್ಯೋಗಃ - ಡಿ.ವೈ.ಎಸ್.ಪಿ. ಶಹಾಬಾದ.
ವಾಸಸ್ಥಳಃ - ಶಹಾಬಾದ.

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಜುಲೈ 2011 ರಿಂದ ಅಕ್ಟೋಬರ್ 2013 ರ ವರೇಗೆ ಯಾದಗಿರಿಯಲ್ಲಿ ವೃತ್ತ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 29.10.2012 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ-7 ರವರಿಂದ ನಾನು ವಹಿಸಿಕೊಂಡಿದೇ. ಅದೇ ದಿವಾಸ ಗುನ್ಹಾ ಸ್ಥಳ ರಾಜೀವ್ ಗಾಂಧಿ ನಗರ ಕಡೆಗೆ ಹೋಗಿ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು. ಚಾಸಾ-1 ರವರು ತೋರಿಸಿದ ಗುನ್ಹಾ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಗ್ಗೆ 8 ರಿಂದ 9-15 ಗಂಟೆಯ ವರೇಗೆ ಚಾಸಾ-2 ಮತ್ತು 3 ರವರ ಸಮಕ್ಷಮ ನಾನು ಜರುಗಿಸಿರುತ್ತೇನೆ. ಅದೇ ದಿವಾಸ ಪ್ರಭು, ಚಾಸಾ-5 ಮತ್ತು 6 ರವರ ಹೇಳಿಕೆಗಳನ್ನು ನಾನು ಪಡೆದುಕೊಂಡಿರುತ್ತೇನೆ. ನನ್ನ ವರ್ಗಾವಣೆ ಆಗಿದ್ದರಿಂದ ಈ ಪ್ರಕರಣದ ಮುಂದಿನ ಕಡತವನ್ನು ಚಾಸಾ-9 ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಗುನ್ಹಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು.

ಮರು ವಿಚಾರಣೆಃ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.